



## ಟ್ವಿಟರ್, ಎಲಾನ್ ಮಸ್ಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ

17

‘ಟೆಸ್ಲಾ’, ‘ಸ್ಪೇಸ್ ಎಕ್ಸ್’ನಂಥ ದೈತ್ಯ ಕಂಪನಿಗಳನ್ನು ಮುನ್ನಡೆಸುತ್ತಿರುವ ವಿಶ್ವದ ಎರಡನೇ ದೊಡ್ಡ ಶ್ರೀಮಂತ ಎಲಾನ್ ಮಸ್ಕ್, ಕೊನೆಗೂ ತಮ್ಮ ದೀರ್ಘ ಕಾಲದ ಅಭಿಲಾಷೆಯಂತೆ 2022ರಲ್ಲಿ ‘ಟ್ವಿಟರ್’ ಅನ್ನು ತಮ್ಮ ಕಬಂಧ ತೆಕ್ಕೆಗೆ ಸೇರಿಸಿಕೊಂಡಿದ್ದಾರೆ. 44 ಶತಕೋಟಿ ಡಾಲರ್ (ಸುಮಾರು 3.62 ಲಕ್ಷ ಕೋಟಿ ರೂ. ಅಂದರೆ, ಮೌಲ್ಯದ ಗಾತ್ರದಲ್ಲಿ ಕರ್ನಾಟಕ ಬಜೆಟ್‌ಗಿಂತಲೂ ಹೆಚ್ಚು) ಹಣವನ್ನು ಸುರಿದು ಟ್ವಿಟರ್ ಅನ್ನು ಮಸ್ಕ್ ಖರೀದಿಸಿದ್ದಾರೆ. ವರ್ಷದ ಆರಂಭದಲ್ಲಿಯೇ ಖರೀದಿ ಪ್ರಕ್ರಿಯೆ ಆರಂಭಗೊಂಡರೂ, ನಡುವೆ ಒಪ್ಪಂದವೇ ಮುರಿದುಬಿದ್ದಿತ್ತು. ಟ್ವಿಟರ್‌ನಲ್ಲಿನ ನಕಲಿ ಖಾತೆಗಳ ಸಂಖ್ಯೆಯನ್ನು ನಿಖರವಾಗಿ ನೀಡುತ್ತಿಲ್ಲ ಎಂದು ದೂರಿದ್ದ ಮಸ್ಕ್, ಖರೀದಿ ಪ್ರಕ್ರಿಯೆಯಿಂದ ದೂರ ಸರಿಯುವುದಾಗಿ ಹೇಳಿದ್ದರು. ಮಸ್ಕ್ ವಿರುದ್ಧ ಟ್ವಿಟರ್ ನ್ಯಾಯಾಂಗ ಹೋರಾಟಕ್ಕೂ ಮುಂದಾಗಿತ್ತು. ಏತನ್ಮಧ್ಯೆ, ನಾಟಕೀಯ ಬೆಳವಣಿಗೆಯೆಂಬಂತೆ ಅ. 27ರ ತಡರಾತ್ರಿ ಖರೀದಿ ಪ್ರಕ್ರಿಯೆ ಪೂರ್ಣಗೊಳಿಸಿ, ಟ್ವಿಟರ್ ಅನ್ನು ಮಸ್ಕ್ ತಮ್ಮದಾಗಿಸಿಕೊಂಡರು. ಅಕ್ಟೋಬರ್ 28ರಂದು ‘ದಿ ಬರ್ಡ್ ಈಸ್ ಫ್ರೀಡ್’ (The bird is freed) ಎನ್ನುವ ಟ್ವೀಟ್ ಮೂಲಕ, ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಇದ್ದ ಅಡಚಣೆ ದೂರವಾಯಿತು ಎನ್ನುವ ಸಂದೇಶವನ್ನು ಅವರು ರವಾನಿಸಿದ್ದರು. ಟ್ವಿಟರ್ ಖರೀದಿಸಿದ ದಿನವೇ, ಕಂಪನಿಯ ಸಿಇಒ ಪರಾಗ್ ಅಗರ್‌ವಾಲ್ ಸೇರಿದಂತೆ ಅನೇಕ ಉನ್ನತಾಧಿಕಾರಿಗಳನ್ನು ವಜಾಗೊಳಿಸಿದ್ದರು. ಕಂಪನಿಯಲ್ಲಿದ್ದ ಶೇ. 50ರಷ್ಟು, ಅಂದರೆ, 3,700 ಉದ್ಯೋಗಿಗಳನ್ನು ಮನೆಗೆ ಕಳಿಸಿದರು. ಅಭಿವ್ಯಕ್ತಿ ಸ್ವಾತಂತ್ರ್ಯದ ಪ್ರತಿಪಾದಕರಂತೆ ಮಾತನಾಡುವ ಐವತ್ತೊಂದು ವರ್ಷದ ಮಸ್ಕ್ ಅವರು ಟ್ವಿಟರ್ ಅನ್ನು ಇನ್ನೊಂದು ಎತ್ತರಕ್ಕೆ ಕೊಂಡೊಯ್ಯುವರೇ ಅಥವಾ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಬಂಡವಾಳಶಾಹಿಯ ಕಪಿಮುಷ್ಟಿಯಲ್ಲಿ ನಲುಗಿಸುವರೇ?

ಭಾರತದಲ್ಲಿ ಸ್ವತಂತ್ರ ಮಾಧ್ಯಮವಾಗಿ ಜನಪ್ರಿಯಗೊಂಡಿದ್ದ ‘ಎನ್‌ಡಿಟಿವಿ’ಯನ್ನು ಅದಾನಿ ಸಮೂಹವು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡಿರುವ ಘಟನೆ ಕೂಡ ಸ್ವತಂತ್ರ ಮಾಧ್ಯಮಗಳ ಮೇಲೆ ಕಾರ್ಪೊರೇಟ್ ಶಕ್ತಿಗಳು ಸಾಧಿಸುತ್ತಿರುವ ನಿಯಂತ್ರಣಕ್ಕೆ ನಿದರ್ಶನದಂತಿದೆ.

## ಭಿನ್ನ ನಡೆ – ದೀರ್ಘ ನಡಿಗೆ

18

ಕರ್ನಾಟಕದ ಮಲ್ಲಿಕಾರ್ಜುನ ಖರ್ಗೆ ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗಿ ಆಯ್ಕೆಯಾದುದು, ರಾಜಕಾರಣಕ್ಕೆ ಸಂಬಂಧಿಸಿದಂತೆ 2022ರ ಮಹತ್ವದ ಸಂಗತಿಗಳಲ್ಲೊಂದು. ಈ ಘಟನೆಗೆ ಎರಡು ರೀತಿಯ ಮಹತ್ವವಿದೆ. ಮೊದಲನೆಯದು, ಕನ್ನಡಿಗರೊಬ್ಬರು ರಾಷ್ಟ್ರೀಯ ಪಕ್ಷದ ಚುಕ್ಕಾಣಿ ಹಿಡಿದಿರುವುದು. ಎರಡನೆಯದು, ನೆಹರೂ ಕುಟುಂಬದ ಹೊರಗಿನವರೊಬ್ಬರು 24 ವರ್ಷಗಳ ಅಂತರದ ನಂತರ ಕಾಂಗ್ರೆಸ್‌ನ ಅಧ್ಯಕ್ಷರಾಗಿರುವುದು. ಸತತ ಸೋಲುಗಳಿಂದ ಜರ್ಝರಿತವಾಗಿರುವ ಪಕ್ಷಕ್ಕೆ ಪುನಶ್ಚೇತನ ನೀಡಬೇಕಾದ ಸವಾಲು ಖರ್ಗೆ ಅವರ ಮುಂದಿದೆ. ಅಕ್ಟೋಬರ್ 17ರಂದು ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಶಶಿ ತರೂರ್ ವಿರುದ್ಧ ಖರ್ಗೆ ಗೆದ್ದಿದ್ದರು.

ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆಯುತ್ತಿರುವ ‘ಭಾರತ್ ಜೋಡೊ’ ಯಾತ್ರೆ 2022ರ ಮತ್ತೊಂದು ಮುಖ್ಯ ರಾಜಕೀಯ ವಿದ್ಯಮಾನ. ಕೋಮುವಾದ, ನಿರುದ್ಯೋಗ, ಧಾರ್ಮಿಕ ಅಸಹನೆ, ರಾಜಕೀಯ ಧ್ರುವೀಕರಣಗಳ ವಿರುದ್ಧದ ಯಾತ್ರೆ ಎಂದು ಬಿಂಬಿಸಲಾಗಿರುವ ‘ಭಾರತ್ ಜೋಡೊ’ ಯಾತ್ರೆ ಭಾರತವನ್ನು ಒಗ್ಗೂಡಿಸುವ ಉದ್ದೇಶ ಹೊಂದಿದೆ ಎಂದು ಸಂಘಟಕರು ಹೇಳಿಕೊಂಡಿದ್ದಾರೆ. ಸೆ. 7ರಂದು ಕನ್ಯಾಕುಮಾರಿಯಲ್ಲಿ ಆರಂಭವಾದ ಪಾದಯಾತ್ರೆ, 150 ದಿನಗಳಲ್ಲಿ 3,570 ಕಿ.ಮೀ. ಕ್ರಮಿಸಿ, ಜಮ್ಮುಕಾಶ್ಮೀರದ ಶ್ರೀನಗರದಲ್ಲಿ ಕೊನೆಗೊಳ್ಳಲಿದೆ.

